# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **170**

ಸದಸ್ಯರ ಹೆಸರು : **ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 28.01.2026

<table>
<tr><th></th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದ ವಿವಿಧ ಕಡೆಗಳಲ್ಲಿ ಸ್ಲೀಪರ್ ಮತ್ತು ಹವಾ ನಿಯಂತ್ರಿತ ಬಸ್‌ಗಳಲ್ಲಿ ಅಪಘಾತ ಸಂಭವಿಸಿ ಬಸ್ಸಿಗೆ ಬೆಂಕಿ ಹೊತ್ತಿಕೊಂಡು ಜೀವ ಹಾನಿಯಾಗುತ್ತಿರುವುದಕ್ಕೆ ಕಾರಣಗಳೇನು; ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ಈ ತರಹದ ಎಷ್ಟು ಅವಘಡಗಳು ಸಂಭವಿಸಿವೆ; ಈ ತರಹದ ಅವಘಡದಲ್ಲಿ ಎಷ್ಟು ಸಾವು ಸಂಭವಿಸಿದೆ; (ವಿವರ ನೀಡುವುದು):</td><td>
ಸ್ಲೀಪರ್ ಮತ್ತು ಹವಾ ನಿಯಂತ್ರಿತ ಬಸ್‌ಗಳ ಅಪಘಾತ ಸಂಭವಿಸಿದಾಗ ಬೆಂಕಿ ಹೊತ್ತಿಕೊಳ್ಳಲು ನಿರ್ದಿಷ್ಟ ಕಾರಣಗಳು ಇರುವುದಿಲ್ಲ. ಆದರೆ, ಅಪಘಾತಗಳ ತನಿಖೆ ಕೈಗೊಂಡ ನಂತರ ನಿರ್ದಿಷ್ಟ ಕಾರಣಗಳನ್ನು ಪತ್ತೆ ಮಾಡಬಹುದಾಗಿದೆ. ಆದರೆ, ಇತ್ತೀಚೆಗೆ ದಿನಾಂಕ:25-12-2025ರಂದು ಚಿತ್ರದುರ್ಗದ ಹಿರಿಯೂರಿನ ಬಳಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಸ್ಲೀಪರ್ ಮತ್ತು ಹವಾ ನಿಯಂತ್ರಿತ ಬಸ್ಸಿಗೆ ಇನ್ನೊಂದು ಕಡೆಯಿಂದ ಭಾರಿ ಸರಕು ಸಾಗಣೆ ವಾಹನವು ಢಿಕ್ಕಿ ಹೊಡೆದ ಸಂದರ್ಭದಲ್ಲಿ ಬಸ್ಸಿನ ಡೀಸೆಲ್ ಟ್ಯಾಂಕ್ ಒಡೆದು ಬೆಂಕಿ ಹೊತ್ತಿಕೊಂಡಿರುತ್ತದೆ. ಕಡಿಮೆ ಸಮಯದಲ್ಲಿ ಇಡೀ ಬಸ್ ಹೊತ್ತಿಕೊಂಡಿದ್ದರಿಂದ 8 ಜನರ ಜೀವಹಾನಿಯಾಗಿರುತ್ತದೆ.
ಕಳೆದ 3 ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ರಸ್ತೆ ಅಪಘಾತ ಪ್ರಕರಣಗಳಲ್ಲಿ ಬಸ್ಸಿಗೆ ಬೆಂಕಿ ಹೊತ್ತಿಕೊಂಡು ಜೀವಹಾನಿ ಯಾಗಿರುವ ವಿವರಗಳು ಕೆಳಕಂಡಂತಿವೆ :-
<table>
<tr><th>ಅಪಘಾತ ದಿನಾಂಕ</th><th>ಅಪಘಾತ ಸ್ಥಳ</th><th>ಅಪಘಾತ ಕ್ಕೀಡಾದ ವಾಹನ ಸಂಖ್ಯೆ</th><th>ಮೃತರ ಸಂಖ್ಯೆ</th></tr>
<tr><td>25-12-2025</td><td>ಹಿರಿಯೂರು ಚಿತ್ರದುರ್ಗ ಜಿಲ್ಲೆ.</td><td>KA-01/AE-5217 - AC Sleeper coach</td><td>08</td></tr>
<tr><td>27-01-2026</td><td>ಹರಿಗೆ, ಹೊಸನಗರ ತಾಲ್ಲೂಕು.</td><td>NL-01/B-1237 Non AC Sleeper coach</td><td>ಯಾವುದೇ ಜೀವಹಾನಿ ಯಾಗಿರುವುದಿಲ್ಲ.</td></tr>
</table>
ಮುಂದುವರೆದು, ಕಳೆದ 03 ವರ್ಷಗಳಲ್ಲಿ ಸರ್ಕಾರಿ ಸ್ಲೀಪರ್ ಮತ್ತು ಹವಾ ನಿಯಂತ್ರಿತ ಬಸ್ಸುಗಳಲ್ಲಿ ಅಪಘಾತ ಸಂಭವಿಸಿ ಬಸ್ಸಿಗೆ ಬೆಂಕಿ ಹೊತ್ತಿಕೊಂಡು ಜೀವ ಹಾನಿಯಾಗಿರುವ ಅವಘಡಗಳು ಸಂಭವಿಸಿರುವುದಿಲ್ಲ.
</td></tr>
<tr><td>ಆ</td><td>ರಾಜ್ಯದಲ್ಲಿ ಸಂಚರಿಸುತ್ತಿರುವ ಸರ್ಕಾರಿ ಮತ್ತು ಖಾಸಗಿ ಹವಾನಿಯಂತ್ರಿತ ಮತ್ತು ಸ್ಲೀಪರ್ ಬಸ್ಗಳಲ್ಲಿ ಸುರಕ್ಷತಾ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆಯೇ; ಈ</td><td>ಸರ್ಕಾರಿ ಮತ್ತು ಖಾಸಗಿ ಹವಾನಿಯಂತ್ರಿತ ಮತ್ತು ಸ್ಲೀಪರ್ ಬಸ್‌ಗಳನ್ನು AIS:119 ಮಾನದಂಡಗಳ ಪ್ರಕಾರ ನಿರ್ಮಿಸಲಾಗುತ್ತಿದೆ. ಇದರಲ್ಲಿ ಎಲ್ಲಾ ಸುರಕ್ಷತಾ ಮಾರ್ಗಸೂಚಿಗಳನ್ನು ಪಾಲಿಸಲಾಗುತ್ತದೆ. ಇತ್ತೀಚೆಗೆ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (NHRC) 10 ಅಂಶಗಳ ನಿರ್ದೇಶನಗಳನ್ನು ನೀಡಿ, ಸದರಿ ಬಸ್ಸುಗಳಲ್ಲಿ ಸುರಕ್ಷತಾ ಮಾರ್ಗಸೂಚಿಗಳನ್ನು ಅಳವಡಿಸಲು ಆದೇಶಿಸಿದ್ದು, ಅದರಂತೆ ದಿ:21-01-2026 ರಂದು ಸಾರಿಗೆ ಮತ್ತು</td></tr>
</table>

| | ಪ್ರಶ್ನೆ | ಉತ್ತರ |
|---|---|---|
| | ಬಗ್ಗೆ ವಿವರ ಮತ್ತು ಮಾರ್ಗಸೂಚಿಗಳ ಪ್ರತಿ ನೀಡುವುದು: | ಮುಜರಾಯಿ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ಎಲ್ಲಾ ಬಸ್ಸು ಮಾಲೀಕರು/ಸಾರಿಗೆ ಪ್ರವರ್ತಕರು/ ಬಸ್ ಕವಚ ನಿರ್ಮಾಣದಾರರುಗಳ ಸಭೆಯನ್ನು ನಡೆಸಿ, ಸದರಿ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿರುತ್ತದೆ. ಸದರಿ ಮಾರ್ಗಸೂಚಿಗಳನ್ವಯ ಬಸ್ಸುಗಳಲ್ಲಿ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಲು ದಿನಾಂಕ:28-02-2026 ರವರೆಗೆ ಕಾಲಾವಕಾಶ ನೀಡಲಾಗಿದೆ. ಸದರಿ ಸಭೆಯ ನಡಾವಳಿಯ ಪ್ರತಿಯನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.<br><br>ಮುಂದುವರೆದು, ಸರ್ಕಾರಿ ಬಸ್ಸುಗಳಿಗೆ ಸಂಬಂಧಿಸಿದಂತೆ, ಸಾರಿಗೆ ಸಂಸ್ಥೆ / ನಿಗಮಗಳ ಹವಾನಿಯಂತ್ರಿತ ಮತ್ತು ಸ್ಲೀಪರ್ ಬಸ್ಸುಗಳಲ್ಲಿ ಪ್ರಯಾಣಿಕರ ಸುರಕ್ಷತೆಗೆ ಕಾಲ ಕಾಲಕ್ಕೆ ಬದಲಾವಣೆಯಾಗಿರುವ ಸರ್ಕಾರದ ಮಾರ್ಗಸೂಚಿ ಹಾಗೂ ಕೇಂದ್ರ ಮೋಟಾರು ವಾಹನಗಳ ನಿಯಮಗಳನ್ವಯ ಈ ಕೆಳಕಂಡ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಳ್ಳಲು ನಿರ್ದೇಶನ ನೀಡಲಾಗಿದೆ.<br><br>1. Fire Extinguisher ಇರುವಿಕೆಯನ್ನು ಖಾತರಿಪಡಿಸಿಕೊಳ್ಳುವುದು,<br>2. First Aid Box ಹಾಗೂ ಔಷಧಿ ಇರುವಿಕೆಯನ್ನು ಖಾತರಿಪಡಿಸಿಕೊಳ್ಳುವುದು,<br>3. Emergency Exit Door ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಖಾತರಿಪಡಿಸಿಕೊಳ್ಳುವುದು.<br>4. Driver Door ಹಾಗೂ ಮುಂಭಾಗ ಮತ್ತು ಮಧ್ಯಭಾಗದ ಸ್ವಯಂ ಚಾಲಿತ Passenger Door (Entry/ Exit) ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಖಾತರಿಪಡಿಸಿಕೊಳ್ಳುವುದು,<br>5. Emergency exit window glass ಗಳನ್ನು ಹೊಡೆಯಲು ಸುತ್ತಿಗೆ (Hammer) ಗಳ ಇರುವಿಕೆಯನ್ನು ಖಾತರಿಪಡಿಸಿಕೊಳ್ಳುವುದು.<br>6. ಒದಗಿಸಲಾದ Fire Detection and Suppression System ಗಳನ್ನು ನಿರ್ವಹಿಸುವುದು. |
| ಇ | ಬಸ್ಸುಗಳಲ್ಲಿ ತುರ್ತು ನಿರ್ಗಮನ ವ್ಯವಸ್ಥೆ, ದೊಡ್ಡ ಗಾಜಿನ ಕಿಟಕಿಗಳನ್ನು ಒಡೆಯಲು ಸುತ್ತಿಗೆಗಳು, ಅಗ್ನಿಶಾಮಕ ವ್ಯವಸ್ಥೆಗಳು ಇರುವ ಬಗ್ಗೆ ಕಾಲಕಾಲಕ್ಕೆ ಪರಿಶೀಲನೆ ನಡೆಸಲಾಗುತ್ತಿದೆಯೇ;<br>ರಾಜ್ಯದಲ್ಲಿ ಈವರೆಗೆ ಎಷ್ಟು ಬಸ್ಸುಗಳ ಪರಿಶೀಲನೆ ನಡೆಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು): | ಬಸ್ಸುಗಳಲ್ಲಿ ತುರ್ತು ನಿರ್ಗಮನ ವ್ಯವಸ್ಥೆ, ದೊಡ್ಡ ಗಾಜಿನ ಕಿಟಕಿಗಳನ್ನು ಒಡೆಯಲು ಸುತ್ತಿಗೆಗಳು, ಅಗ್ನಿಶಾಮಕ ವ್ಯವಸ್ಥೆಗಳು ಇರುವ ಬಗ್ಗೆ ವಾಹನಗಳನ್ನು ನೋಂದಣಿ ಮತ್ತು ಅರ್ಹತಾ ಪತ್ರ ನವೀಕರಣಕ್ಕೆ ಬಂದಂತಹ ಸಂದರ್ಭಗಳಲ್ಲಿ ಹಾಗೂ ವಾಹನಗಳ ತಪಾಸಣಾ ಸಮಯದಲ್ಲಿ ಪರಿಶೀಲಿಸಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ 13,799 ವಾಹನಗಳನ್ನು ತಪಾಸಣೆಗೊಳಪಡಿಸಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.<br><br>ಮುಂದುವರೆದು, ಸಾರಿಗೆ ನಿಗಮ / ಸಂಸ್ಥೆಗಳ ಘಟಕಗಳ ವ್ಯಾಪ್ತಿಯಲ್ಲಿ ಇರುವ ಎಲ್ಲಾ ಬಸ್ಸುಗಳನ್ನು ಕಾರ್ಯಾಚರಣೆಗೆ ನಿಯೋಜಿಸುವ ಮುನ್ನ ಘಟಕದ ವಾಹನ ಪರಿವೀಕ್ಷಕರು ಬಸ್ಸುಗಳಲ್ಲಿ ಇರುವ ತುರ್ತು ನಿರ್ಗಮನ ಬಾಗಿಲುಗಳು ತೆರೆಯುವುದು, ಮುಚ್ಚುವಿಕೆ, ದೊಡ್ಡ ಗಾಜಿನ ಕಿಟಕಿಗಳನ್ನು ಒಡೆಯಲು ಸುತ್ತಿಗೆಗಳು ಹಾಗೂ ಅಗ್ನಿಶಾಮಕ ಉಪಕರಣಗಳು ಲಭ್ಯವಿರುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಪರಿಶೀಲನೆ ನಡೆಸಿರುವ ವಿಭಾಗವಾರು ವಾಹನಗಳ ಪಟ್ಟಿಯನ್ನು ಈ ಕೆಳಕಂಡಂತೆ ಒದಗಿಸಲಾಗಿದೆ. |

| | ಪ್ರಶ್ನೆ | ಉತ್ತರ |
|---|---|---|

**KSRTC**

| ಕ್ರ. ಸಂ. | ವಿಭಾಗ | ವಾಹನಗಳ ಸಂಖ್ಯೆ |
|---|---|---|
| 1 | ಬೆಂಗಳೂರು ಕೇಂದ್ರ | 670 |
| 2 | ಬೆಂಗಳೂರು ದಕ್ಷಿಣ | 462 |
| 3 | ತುಮಕೂರು | 694 |
| 4 | ಕೋಲಾರ | 564 |
| 5 | ಚಿಕ್ಕಬಳ್ಳಾಪುರ | 587 |
| 6 | ಮೈಸೂರು ನಗರ | 540 |
| 7 | ಮೈಸೂರು ಗ್ರಾಮಾಂತರ | 717 |
| 8 | ಮಂಡ್ಯ | 521 |
| 9 | ಚಾಮರಾಜನಗರ | 425 |
| 10 | ಹಾಸನ | 610 |
| 11 | ಚಿಕ್ಕಮಗಳೂರು | 578 |
| 12 | ಮಂಗಳೂರು | 583 |
| 13 | ಪುತ್ತೂರು | 528 |
| 14 | ದಾವಣಗೆರೆ | 430 |
| 15 | ಶಿವಮೊಗ್ಗ | 400 |
| 16 | ಚಿತ್ರದುರ್ಗ | 349 |
| | **ಒಟ್ಟು** | **8658** |

**NWKRTC**

| ಜಿಲ್ಲೆ | ಬಸ್ಸುಗಳ ಸಂಖ್ಯೆ |
|---|---|
| ಬೆಳಗಾವಿ | 1578 |
| ಧಾರವಾಡ | 1066 |
| ಉತ್ತರ ಕನ್ನಡ | 692 |
| ಬಾಗಲಕೋಟೆ | 698 |
| ಗದಗ | 569 |
| ಹಾವೇರಿ | 583 |
| ಒಟ್ಟು | 5186 |

**KKRTC**

| ಜಿಲ್ಲೆ | ಪರಿಶೀಲಿಸಿರುವ ವಾಹನಗಳು |
|---|---|
| ಕಲಬುರಗಿ | 1010 |
| ಯಾದಗಿರಿ | 400 |
| ಬೀದರ | 633 |
| ರಾಯಚೂರು | 690 |
| ಕೊಪ್ಪಳ | 505 |
| ಬಳ್ಳಾರಿ | 465 |
| ಹೊಸಪೇಟೆ | 485 |
| ವಿಜಯಪುರ | 835 |
| **ಒಟ್ಟು** | **5023** |

| | ಪ್ರಶ್ನೆ | ಉತ್ತರ |
|---|---|---|
| ಈ | ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸುರಕ್ಷತೆ ಬಗ್ಗೆ ಪರೀಕ್ಷಿಸುವ ಪ್ರಾಧಿಕಾರ ಯಾವುದು; ಬಸ್ಸುಗಳ ಲಗೇಜ್ ಬಾಕ್ಸ್‌ಗಳಲ್ಲಿ ತುಂಬುವ ವಸ್ತುಗಳಿಗೆ ನಿರ್ಧಿಷ್ಟ ಮಾರ್ಗಸೂಚಿ ಮತ್ತು ಪ್ರಯಾಣಿಕರಿಗೆ ಸುರಕ್ಷತೆ ಬಗ್ಗೆ ಮಾರ್ಗದರ್ಶನ ನೀಡಲಾಗುತ್ತಿದೆಯೇ; | ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸುರಕ್ಷತೆ ಬಗ್ಗೆ ಪರೀಕ್ಷಿಸುವ ಪ್ರಾಧಿಕಾರ ಸಾರಿಗೆ ಇಲಾಖೆಯ ಎಲ್ಲಾ ನೋಂದಣಿ ಪ್ರಾಧಿಕಾರಗಳಾಗಿರುತ್ತವೆ.<br><br>ಯಾವ ರೀತಿಯ ಲಗೇಜುಗಳನ್ನು ಬಸ್ಸುಗಳಲ್ಲಿ ಕೊಂಡೊಯ್ಯಬಾರದು ಎಂಬ ಬಗ್ಗೆ ರಹದಾರಿ ನಿಬಂಧನೆಗಳಲ್ಲಿ ನಮೂದಿಸಲಾಗಿರುತ್ತದೆ.<br><br>ಬಸ್‌ಗಳಲ್ಲಿ ಸುರಕ್ಷತಾ ಮಾನದಂಡಗಳನ್ನು ಅಳವಡಿಸಲು ವಾಹನ ಮಾಲೀಕರು / ವಾಹನ ಕವಚ ತಯಾರಕರುಗಳಿಗೆ ದಿನಾಂಕ:21-01-2026 ರಂದು ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ದೇಶನಗಳನ್ನು ನೀಡಲಾಗಿರುತ್ತದೆ.<br>ಮುಂದುವರೆದು, ಸದರಿ ಸಭೆಯಲ್ಲಿ ಪ್ರಯಾಣಿಕರ ಸುರಕ್ಷತೆಗೆ ಸಂಬಂಧಪಟ್ಟಂತೆ ಜಾಗೃತಿ ಮೂಡಿಸುವ ಸಲುವಾಗಿ ಎಲ್ಲಾ ಬಸ್ಸುಗಳಲ್ಲಿ **Public Address System** ಅಳವಡಿಸಿಕೊಂಡು ಅಗತ್ಯ ಸುರಕ್ಷತಾ ಕ್ರಮಗಳ ಬಗ್ಗೆ ತಿಳಿಸಲು ಸೂಚಿಸಲಾಗಿದೆ.<br>ಮುಂದುವರೆದು, ಸಾರಿಗೆ ನಿಗಮ/ಸಂಸ್ಥೆಗಳ ಬಸ್ಸುಗಳಲ್ಲಿ ಸಾಗಿಸಲು ಅನುಮತಿ ಇರುವ ಸರಕುಗಳ ಬಗ್ಗೆ ಚಾಲನಾ ಸಿಬ್ಬಂದಿಗಳು ಪರಿಶೀಲಿಸಿ, ಸದರಿ ಲಗೇಜ್ / ಸರಕುಗಳು ಸಾಗಾಣಿಕೆಗೆ ಯೋಗ್ಯವಾಗುವ ರೀತಿಯಲ್ಲಿ ಸಮರ್ಪಕವಾಗಿ ಪ್ಯಾಕಿಂಗ್ ಸ್ಥಿತಿಯಲ್ಲಿ ಇರುವುದನ್ನು ಖಚಿತಪಡಿಸಿಕೊಂಡು ಸಾಗಿಸಲು ಕ್ರಮ ವಹಿಸಲಾಗುತ್ತಿದೆ. ಸಾರ್ವಜನಿಕ ಪ್ರಯಾಣಿಕರು ಯಾವುದೇ ರೀತಿಯ ಸ್ಫೋಟಕ ವಸ್ತುಗಳು ಮತ್ತು ಅಗ್ನಿ ಅವಘಡಗಳಿಗೆ ಕಾರಣವಾಗಬಹುದಾದ ನಿರ್ಭಂದಿತ ವಸ್ತುಗಳನ್ನು ಬಸ್ಸಳ ಲಗೇಜ್ ಬಾಕ್ಸ್ಗಳಲ್ಲಿ ಸಾಗಿಸುವುದನ್ನು ಕಟ್ಟುನಿಟ್ಟಾಗಿ ನಿರ್ಭಂದಿಸಲು ಎಲ್ಲಾ ವಿಭಾಗಗಳ ನಿಯಂತ್ರಣಾಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ ಹಾಗೂ ಸುರಕ್ಷತೆ ಬಗೆ, ಚಾಲನಾ ಸಿಬ್ಬಂದಿಗಳಿಗೆ ಹಾಗೂ ಪ್ರಯಾಣಿಕರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. |
| ಉ | ಕಳೆದ 3 ವರ್ಷಗಳಲ್ಲಿ ಸರ್ಕಾರಿ ಮತ್ತು ಖಾಸಗಿ ಬಸ್ಸಿನ ಚಾಲಕರ ಅತಿಯಾದ ವೇಗ ಮತ್ತು ಮದ್ಯ ಸೇವಿಸಿ ವಾಹನ ಚಲಾಯಿಸುವುದು, ಚಾಲಕನ ಅಜಾಗರೂಕತೆ ಮುಂತಾದ ಕಾರಣಗಳಿಂದ ಸಂಭವಿಸಿದ ಅಪಘಾತಗಳು ಎಷ್ಟು: (ಜಿಲ್ಲಾವಾರು ಮಾಹಿತಿ ನೀಡುವುದು): | ಈ ಕುರಿತು, ಪೊಲೀಸ್ ಇಲಾಖೆಯು ಒದಗಿಸಿರುವ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-3** ರಲ್ಲಿ ಒದಗಿಸಲಾಗಿದೆ.<br><br>ಮುಂದುವರೆದು, ಸಾರಿಗೆ ನಿಗಮ/ಸಂಸ್ಥೆಗಳಲ್ಲಿ ಕಳೆದ 05 ವರ್ಷಗಳಲ್ಲಿ ವಿವಿಧ ಕಾರಣಗಳಿಂದ ಸಂಭವಿಸಿದ ಅಪಘಾತದ ವಿವರಗಳನ್ನು **ಅನುಬಂಧ-4** ರಲ್ಲಿ ಒದಗಿಸಲಾಗಿದೆ. |
| ಊ | ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಪರವಾನಿಗೆ ನೀಡುವಾಗ ಹಾಗೂ ನವೀಕರಿಸುವಾಗ ಚಾಲಕರನ್ನು ಕಡ್ಡಾಯವಾಗಿ ಆರೋಗ್ಯ ತಪಾಸಣೆಗೆ ಒಳಪಡಿಸಲು ಇರುವ ಸಮಸ್ಯೆಗಳು ಏನು? | ಮೋಟಾರು ವಾಹನ ಕಾಯ್ದೆ ಮತ್ತು ಅದರಡಿ ರಚಿತವಾದ ನಿಯಮಗಳನ್ವಯ, ಸಾರ್ವಜನಿಕರಿಗೆ ಸಾರಿಗೇತರ ವಾಹನ ಚಾಲನೆ ಮಾಡಲು ಚಾಲನಾ ಅನುಜ್ಞಾಪತ್ರ (Driving License) ನೀಡುವ ಸಂದರ್ಭದಲ್ಲಿ ವೈದ್ಯಕೀಯ ಪ್ರಮಾಣಪತ್ರವನ್ನು ಕಡ್ಡಾಯಗೊಳಿಸಿರುವುದಿಲ್ಲ. ಆದರೆ, 50 ವರ್ಷ ಮೇಲ್ಪಟ್ಟವರಿಗೆ ಚಾಲನಾ ಅನುಜ್ಞಾಪತ್ರ ನೀಡಿಕೆ / ನವೀಕರಣ ಸಮಯದಲ್ಲಿ ವೈದ್ಯಕೀಯ ಪ್ರಮಾಣಪತ್ರ ಹಾಜರುಪಡಿಸುವುದನ್ನು ಕಡ್ಡಾಯಗೊಳಿಸಲಾಗಿರುತ್ತದೆ. |

**ಟಿಡಿ 3 ಟಿಡಿಕ್ಯೂ 2026**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.

ಅನುಬಂಧ - 1

**ದಿನಾಂಕ:21-01-2026 ರಂದು ಸಂಜೆ 5-00 ಗಂಟೆಗೆ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆ – ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್.ಹೆಚ್.ಆರ್.ಸಿ) ಪ್ರಕರಣ ಸಂಖ್ಯೆ: 1834/90/0/2025 ರಲ್ಲಿ ನೀಡಲಾಗಿರುವ ಶಿಫಾರಸ್ಸುಗಳ ಅನುಷ್ಠಾನ ಕುರಿತು ರಾಜ್ಯದ ಎಲ್ಲಾ ಅಪರ ಸಾರಿಗೆ ಆಯುಕ್ತರು / ಜಂಟಿ ಸಾರಿಗೆ ಆಯುಕ್ತರು ಮತ್ತು ಬಸ್ ಬಾಡಿ ಬಿಲ್ಡರ್ಸ್ ಹಾಗೂ ಎಲ್ಲಾ ಖಾಸಗಿ ಬಸ್ ಮಾಲೀಕರು/ಆಪರೇಟರ್ ಗಳೊಂದಿಗೆ ನಡೆಸಿದ ಸಭೆಯ ನಡವಳಿಗಳು**

***

**ಘನ ಉಪಸ್ಥಿತಿ ಮತ್ತು ಅಧ್ಯಕ್ಷತೆ :**

**ಶ್ರೀ ರಾಮಲಿಂಗಾರೆಡ್ಡಿ,**
**ಮಾನ್ಯ ಸಚಿವರು,**
**ಸಾರಿಗೆ ಮತ್ತು ಮುಜರಾಯಿ ಇಲಾಖೆ.**

**ಹಾಜರಾತಿ.**

1. ಡಾ. ಎನ್.ವಿ.ಪ್ರಸಾದ್, ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು,
ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ
ಬೆಂಗಳೂರು-56001.

2. ಶ್ರೀ ಎ.ಎಂ.ಯೋಗೀಶ್, ಭಾ.ಆ.ಸೇ.,
ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ,
ಬೆಂಗಳೂರು

3. ಶ್ರೀ ಬಿ.ಪಿ.ಉಮಾಶಂಕರ,
ಅಪರ ಸಾರಿಗೆ ಆಯುಕ್ತರು ಮತ್ತು
ಕಾರ್ಯದರ್ಶಿ, ರಾಜ್ಯ ಸಾರಿಗೆ ಪ್ರಾಧಿಕಾರ,
ಬೆಂಗಳೂರು.

4. ಶ್ರೀ ಸಿ.ಮಲ್ಲಿಕಾರ್ಜುನ,
ಅಪರ ಸಾರಿಗೆ ಆಯುಕ್ತರು (ಆಡಳಿತ)
ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು

5. ಶ್ರೀ ಜೆ.ಜ್ಞಾನೇಂದ್ರ ಕುಮಾರ,
ಅಪರ ಸಾರಿಗೆ ಆಯುಕ್ತರು (ಪರಿಸರ ಮತ್ತು ಇ-ಆಡಳಿತ)
ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು

6. ಶ್ರೀ ಕೆ.ಟಿ.ಹಾಲಸ್ವಾಮಿ,
ಅಪರ ಸಾರಿಗೆ ಆಯುಕ್ತರು (ಪ್ರವರ್ತನ) (ಉತ್ತರ)
ಧಾರವಾಡ.

7. ಶ್ರೀಮತಿ ಎಂ.ಪಿ. ಓಂಕಾರೇಶ್ವರಿ,
   ಅಪರ ಸಾರಿಗೆ ಆಯುಕ್ತರು (ಪ್ರವರ್ತನ) (ದಕ್ಷಿಣ)
   ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು

8. ಶ್ರೀಮತಿ ಎಂ.ಶೋಭಾ,
   ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು ನಗರ ವಿಭಾಗ
   ಮತ್ತು ಮೈಸೂರು ವಿಭಾಗ

9. ಬೆಂಗಳೂರು ನಗರ ಮತ್ತು ಗ್ರಾಮಾಂತರ ವಿಭಾಗಗಳ
   ಎಲ್ಲಾ ಅಧೀನ ಕಛೇರಿಗಳ ಮುಖ್ಯಸ್ಥರು.

10. ರಾಜ್‌ಯದ ಎಲ್ಲಾ ಬಸ್ ಬಾಡಿ ಬಿಲ್ಡರ್‌ಗಳ ಪ್ರತಿನಿಧಿಗಳು

11. ರಾಜ್ಯದ ಎಲ್ಲಾ ಖಾಸಗಿ ಬಸ್ ಮಾಲೀಕರ ಸಂಘದ ಪ್ರತಿನಿಧಿಗಳು
    ಮತ್ತು ಆಪರೇಟರ್ಸ್ / ಸಂಘದ ಪ್ರತಿನಿಧಿಗಳು

***

ಪ್ರಥಮವಾಗಿ, ಸಭೆಯಲ್ಲಿ ಉಪಸ್ಥಿತರಿದ್ದ ಸನ್ಮಾನ್ಯ ಸಚಿವರು, ಸಾರಿಗೆ ಮತ್ತು ಮುಜರಾಯಿ ಇಲಾಖೆ ರವರನ್ನು ಅಪರ ಸಾರಿಗೆ ಆಯುಕ್ತರು (ಆಡಳಿತ) ರವರು ಸ್ವಾಗತಿಸಿದರು. ಸಭೆಯಲ್ಲಿ ಹಾಜರಿದ್ದ ಸರ್ಕಾರದ ಕಾರ್ಯದರ್ಶಿ, ಸಾರಿಗೆ ಇಲಾಖೆ, ಸಾರಿಗೆ ಆಯುಕ್ತರು, ರಾಜ್ಯದ ಎಲ್ಲಾ ಅಪರ ಸಾರಿಗೆ ಆಯುಕ್ತರು, ಎಲ್ಲಾ ವಿಭಾಗಗಳ ಜಂಟಿ ಸಾರಿಗೆ ಆಯುಕ್ತರು ಮತ್ತು ಅಧೀನ ಕಛೇರಿಗಳ ಮುಖ್ಯಸ್ಥರನ್ನು, ಬಸ್ ಬಾಡಿ ಬಿಲ್ಡರ್ಸ್ ಮತ್ತು ಎಲ್ಲಾ ಖಾಸಗಿ ಬಸ್ ಆಪರೇಟರ್ ಗಳು, ಬಸ್ ಮಾಲೀಕರ ಸಂಘದ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಆರಂಭಿಸಲಾಯಿತು.

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಇವರಿಂದ ಸ್ವೀಕರಿಸಿರುವ ಪತ್ರದಲ್ಲಿ ಪ್ರಸ್ತಾಪಿಸಿರುವಂತೆ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಪ್ರಕರಣ ಸಂಖ್ಯೆ: 1834/90/0/2025 ರ ಸಂಬಂಧ ಆಯೋಗದ ನಿರ್ದೇಶನದಂತೆ ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ರೋಡ್ ಟ್ರಾನ್ಸ್ ಪೋರ್ಟ್ (ಸಿ.ಐ.ಆರ್.ಟಿ.) ಸಂಸ್ಥೆಯು ಅಧ್ಯಯನ ನಡೆಸಿ ನೀಡಿರುವ ಶಿಫಾರಸ್ಸು ಗಳನ್ನು ಆಯೋಗವು ಪರಿಗಣಿಸಿ ಕಡ್ಡಾಯವಾಗಿ ಅನುಷ್ಠಾನಗೊಳಿಸಲು ಸೂಚಿಸಲಾಗಿರುತ್ತದೆ.

ಮುಂದುವರೆದು, ಆಯುಕ್ತರು ಹಾಗೂ ಅಪರ ಸಾರಿಗೆ ಆಯುಕ್ತರು (ಪ್ರವರ್ತನ) (ದಕ್ಷಿಣ) ರವರು ಮಾತನಾಡಿ, ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ರವರಿಂದ ಬಂದಿರುವ ಪತ್ರದಲ್ಲಿ, ಬಸ್ಸುಗಳ ಕವಚ ನಿರ್ಮಾಣದ ಸಮಯದಲ್ಲಿ ಬಸ್ ಬಾಡಿ ತಯಾರಕರ (ಬಸ್ ಬಾಡಿ ಬಿಲ್ಡರ್ಸ್) ಕೇಂದ್ರ ಮೋಟಾರು ವಾಹನಗಳ ನಿಯಮಗಳು 1989ರ ನಿಯಮ 125-C ರಲ್ಲಿ ತಿಳಿಸಿರುವಂತೆ ವಾಹನವು Automotive Industry Standard AIS:052 ಹಾಗೂ Sleeper Coach Buses AIS:119 ಪ್ರಕಾರ ಇಲ್ಲದೇ ನಿಯಮ ಉಲ್ಲಂಘಿಸಿ ಬಸ್ ಕವಚಗಳನ್ನು ನಿರ್ಮಿಸುತ್ತಿರುವ ಬಗ್ಗೆ

ಸಭೆಯ ಗಮನಕ್ಕೆ ತಂದರು. ಸಭೆಯಲ್ಲಿ ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು ಮತ್ತು ಕೆಳಕಂಡ ನಿರ್ದೇಶನಗಳನ್ನು ಮಾನ್ಯ ಸಚಿವರು ನೀಡಿದರು.

1. **It is suggested to recall of all sleeper coaches, registered for immediate removal of driver partition door.**

ರಾಜ್ಯದಲ್ಲಿ ನೋಂದಾಯಿಸಲಾಗಿರುವ ಎಲ್ಲಾ ಬಸ್ಸುಗಳಲ್ಲಿ ಚಾಲಕರ ಹಿಂದೆ ಅಳವಡಿಸಿರುವ ವಿಭಜಕ ಹಾಗೂ ಅದರ ಬಾಗಿಲುಗಳನ್ನು ಕೂಡಲೆ ತೆಗೆದುಹಾಕುವಂತೆ ಸಭೆಯಲ್ಲಿ ಹಾಜರಿದ್ದ ಬಸ್ ಮಾಲೀಕರಿಗೆ ಸೂಚಿಸಲಾಯಿತು. ಹಾಗೂ ಇನ್ನುಮುಂದೆ ಬಸ್ ಕವಚ ನಿರ್ಮಾಣ ಮಾಡುವಾಗ ಈ ರೀತಿಯ ವಿಭಜಕಗಳನ್ನು ನಿರ್ಮಿಸದಂತೆ ಕ್ರಮ ವಹಿಸಲು ಬಸ್ ಕವಚ ನಿರ್ಮಾಣದ ಸಂಸ್ಥೆಗಳ ಪ್ರತಿನಿಧಿಗಳಿಗೆ ಸೂಚಿಸಲಾಯಿತು. ಇದಲ್ಲದೆ ಇಲಾಖೆಯ ಪ್ರವರ್ತನ ಅಧಿಕಾರಿಗಳು ಈ ಕುರಿತು ಅರ್ಹತಾ ಪತ್ರ ನವೀಕರಣ ಸಮಯದಲ್ಲಿ ಭೌತಿಕವಾಗಿ ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರವೇ ನವೀಕರಿಸಲು ಹಾಗೂ ಪ್ರವರ್ತನ ಕಾರ್ಯದಲ್ಲಿ ಈ ಬಗ್ಗೆ ಆದ್ಯತೆ ಮೇರೆಗೆ ತನಿಖೆ ನಡೆಸಿ ಬಸ್‌ಗಳಲ್ಲಿ ಅಳವಡಿಸಿರುವ ವಿಭಜಕಗಳನ್ನು ತೆಗೆದುಹಾಕಿರುವ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಕಡ್ಡಾಯವಾಗಿ ಕ್ರಮ ವಹಿಸುವುದು.

**(ಕ್ರಮ: ಬಸ್ ಬಾಡಿ ಬಿಲ್ಡರ್ಸ್, ಬಸ್ ಆಪರೇಟರ್ಸ್, ಪ್ರಾ.ಸಾ.ಅ.ಮತ್ತು ಕಾರ್ಯನಿರ್ವಾಹಕ ಸಿಬ್ಬಂದಿಗಳು)**

2. **Sliders fitted to all sleeper berths of sleeper coaches shall be removed immediately.**

ಅಪಘಾತಗಳು ಸಂಭವಿಸಿದಾಗ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ ಆಸನಗಳಿಗೆ ಅಳವಡಿಸಿರುವ ಸ್ಲೈಡರ್ ಗಳಿಂದಾಗಿ ಕೂಡಲೇ ಪ್ರಯಾಣಿಕರು ಹೊರಗೆ ಬರುವುದಕ್ಕೆ ತೊಂದರೆಯಾಗುವುದ ರಿಂದ ಕೂಡಲೇ ಇದನ್ನು ತೆಗೆದು ಹಾಕುವುದಕ್ಕೆ ಕ್ರಮವಹಿಸಲು ತಿಳಿಸುತ್ತಾ, ಇದಲ್ಲದೆ ಇಲಾಖೆಯ ಪ್ರವರ್ತನ ಅಧಿಕಾರಿಗಳು ಈ ಕುರಿತು ಅರ್ಹತಾ ಪತ್ರ ನವೀಕರಣ ಸಮಯದಲ್ಲಿ ಭೌತಿಕವಾಗಿ ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರವೇ ನವೀಕರಿಸಲು ಹಾಗೂ ಪ್ರವರ್ತನ ಕಾರ್ಯದಲ್ಲಿ ಈ ಬಗ್ಗೆ ಆದ್ಯತೆ ಮೇರೆಗೆ ತನಿಖೆ ನಡೆಸಿ ಬಸ್‌ಗಳಲ್ಲಿ ಅಳವಡಿಸಿರುವ ಸ್ಲೈಡರ್‌ಗಳನ್ನು ತೆಗೆದುಹಾಕಿರುವ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಕಡ್ಡಾಯವಾಗಿ ಕ್ರಮ ವಹಿಸುವುದು.

**(ಕ್ರಮ: ಬಸ್ ಬಾಡಿ ಬಿಲ್ಡರ್ಸ್, ಬಸ್ ಆಪರೇಟರ್ಸ್, ಪ್ರಾ.ಸಾ.ಅ.ಮತ್ತು ಕಾರ್ಯನಿರ್ವಾಹಕ ಸಿಬ್ಬಂದಿಗಳು)**

**3. One month time to be given to bus operators to fit FDSS in all sleeper coaches.**

ಸನ್ಮಾನ್ಯ ಸಚಿವರು ಮಾತನಾಡಿ, ಈ ಹಿಂದೆ 2013ರಲ್ಲಿ ಇಲಾಖೆಯ ಸಚಿವನಾಗಿದ್ದ ಸಮಯ ದಲ್ಲಿ ಕೆಲವು ರಸ್ತೆ ಅಪಘಾತಗಳನ್ನು ಖುದ್ದಾಗಿ ಪರಿವೀಕ್ಷಣೆ ಮಾಡಿದಾಗ, ತುರ್ತು ನಿರ್ಗಮನ ದ್ವಾರಗಳು ಎಷ್ಟುಅವಶ್ಯಕ ಎಂದು ತಿಳಿದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಸೇರಿದಂತೆ ಖಾಸಗಿ ಬಸ್ಸುಗಳಲ್ಲಿ ತುರ್ತು ನಿರ್ಗಮನ ದ್ವಾರಗಳನ್ನು ಅಳವಡಿಸಲು ಕ್ರಮ ವಹಿಸಲಾಗಿರುತ್ತದೆ. ಅದೇರೀತಿ, ದಿನಾಂಕ:13-11-2025ರಂದು ನಡೆದ ಇಲಾಖಾ ಪ್ರಗತಿ ಪರಿಶೀಲನಾ ಸಭೆಯಲ್ಲಿಯೂ ಸಹ ಸಾರ್ವಜನಿಕ ಸೇವಾ ವಾಹನಗಳಲ್ಲಿ ತುರ್ತು ನಿರ್ಗಮನ ದ್ವಾರಗಳ (Emergency Exit Door)ಅನ್ನು ಕಡ್ಡಾಯವಾಗಿ ಅಳವಡಿಸಿರುವುದನ್ನು ಖಚಿತಪಡಿಸಿ ಕೊಂಡ ನಂತರವಷ್ಟೇ ವಾಹನ ನೋಂದಣಿ ಮತ್ತು ಅರ್ಹತಾ ಪತ್ರವನ್ನು ನವೀಕರಿಸಬೇಕೆಂದು ಕಟ್ಟುನಿಟ್ಟಾಗಿ ನಿರ್ದೇಶನ ನೀಡಲಾಗಿರುವುದನ್ನು ಮತ್ತೊಮ್ಮೆ ಸಭೆಯ ಗಮನಕ್ಕೆ ತಂದರು. ಇತ್ತೀಚೆಗೆ ಸಂಭವಿಸುತ್ತಿರುವ ಸಾಮಾನ್ಯ ಬಸ್ಸುಗಳು ಮತ್ತು ಎ.ಸಿ. ಬಸ್ಸುಗಳ ಅಪಘಾತಗಳ ಬಗ್ಗೆ ಪ್ರಸ್ತಾಪಿಸುತ್ತಾ, ಎಲ್ಲಾ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ ಕಡ್ಡಾಯವಾಗಿ ಅಗ್ನಿಪತ್ತೆ ಮತ್ತು ಶಮನ ವ್ಯವಸ್ಥೆ(Fire Detection & suppression system-FDSS)ಯನ್ನು ಅಳವಡಿಸಲು ಸೂಚಿಸಲಾಯಿತು.

ಮಾನವ ಹಕ್ಕುಗಳ ಆಯೋಗದ ನಿರ್ದೇಶನದಂತೆ ನೀಡಿರುವ ಶಿಫಾರಸ್ಸುಗಳನ್ನು ಒಂದು ತಿಂಗಳ ಕಾಲಾವಧಿಯಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ಎಲ್ಲಾ ಖಾಸಗಿ ಬಸ್ಸುಗಳ ಮಾಲೀಕರಿಗೆ ಸೂಚಿಸುತ್ತಾ, ತಪ್ಪಿದಲ್ಲಿ ಮೋಟಾರು ವಾಹನ ಕಾಯ್ದೆ ಮತ್ತು ನಿಯಮಾವಳಿಯ ಅನುಸಾರ ಕಟ್ಟುನಿಟ್ಟಿನ ಕ್ರಮ ವಹಿಸಲಾಗುವುದೆಂದು ಸೂಚಿಸಿದರು. ಇದಲ್ಲದೇ ಎಲ್ಲಾ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ ಕಡ್ಡಾಯವಾಗಿ ಅಗ್ನಿಪತ್ತೆ ಮತ್ತು ಶಮನ ವ್ಯವಸ್ಥೆ(Fire detection & suppression system-FDSS)ಗಳನ್ನು ಅಳವಡಿಸಿದ ಬಗ್ಗೆ ಪ್ರವರ್ತನ ಸಿಬ್ಬಂದಿಗಳು ಭೌತಿಕವಾಗಿ ವಾಹನಗಳನ್ನು ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಆಯಾಯ ಕಛೇರಿಯ ಮುಖ್ಯಸ್ಥರು ತಮ್ಮ ವಿಭಾಗಗಳ ಮೇಲಾಧಿಕಾರಿಗಳ ಮುಖಾಂತರ ಕೇಂದ್ರ ಕಛೇರಿಗೆ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಲಾಯಿತು.

ಮುಂದುವರೆದು, ಸದರಿ ವಿಷಯದ ಗಂಭೀರತೆಯನ್ನು ಪರಿಗಣಿಸಿ, ಆದ್ಯತೆಯ ಮೇರೆಗೆ ನಿಯಮಾನುಸಾರ ಕ್ರಮ ವಹಿಸಿದ ಬಗ್ಗೆ ಮುಂದಿನ ಒಂದು ತಿಂಗಳ ಒಳಗಾಗಿ ಮಾನವ ಹಕ್ಕುಗಳ ಆಯೋಗಕ್ಕೆ ವರದಿ ಸಲ್ಲಿಸಬೇಕಾಗಿದ್ದು ಕೂಡಲೇ ಸೂಕ್ತ ಕ್ರಮಗಳನ್ನು ವಹಿಸಿ ವರದಿ ಸಲ್ಲಿಸುವಂತೆ ಸೂಚಿಸಲಾಯಿತು.

**(ಕ್ರಮ: ಬಸ್ ಬಾಡಿ ಬಿಲ್ಡರ್ಸ್, ಬಸ್ ಆಪರೇಟರ್ಸ್, ಪ್ರಾ.ಸಾ.ಅ.ಮತ್ತು ಕಾರ್ಯನಿರ್ವಾಹಕ ಸಿಬ್ಬಂದಿಗಳು)**

--5

4. **Fire extinguishers of 10kg minimum (in green Zone) shall be checked in all buses.**

ಇತ್ತೀಚೆಗೆ ಸಂಭವಿಸುತ್ತಿರುವ ಸಾಮಾನ್ಯ ಬಸ್ಸುಗಳು ಮತ್ತು ಎ.ಸಿ. ಬಸ್ಸುಗಳ ಅಪಘಾತಗಳ ಬಗ್ಗೆ ಪ್ರಸ್ತಾಪಿಸುತ್ತಾ, ಎಲ್ಲಾ ಸ್ಲೀಪರ್ ಕೋಚ್ ಬಸ್ಸುಗಳಲ್ಲಿ ಕಡ್ಡಾಯವಾಗಿ ಕನಿಷ್ಠ 10 ಕೆ.ಜಿ. ಪ್ರಮಾಣದ ಅಗ್ನಿಶಾಮಕ ಸಾಧನವನ್ನು(Fire extinguishers 10kg minimum)ಗಳು ಹೊಂದ ಬೇಕಾಗಿದ್ದು, ಕೆಲವು ಬಸ್ಸುಗಳು ಸದರಿ ಪ್ರಮಾಣದ ಸಾಧನ ಅಳವಡಿಸದೇ ಇರುವುದರಿಂದ ಬಸ್ಸುಗಳ ಬೆಂಕಿ ಅವಘಡಗಳ ಸಂದರ್ಭಗಳಲ್ಲಿ ಬೆಂಕಿಯನ್ನು ನಂದಿಸಲು ಕಷ್ಟವಾಗಿ ಹೆಚ್ಚಿನ ಸಾವು ನೋವುಗಳು ಸಂಭವಿಸುತ್ತಿರುವುದು ಕಂಡುಬರುತ್ತಿದೆ. ಆದುದರಿಂದ, ಸದರಿ ಸಾಧನವನ್ನು ಎಲ್ಲಾ ಬಸ್ಸುಗಳಲ್ಲಿ ಕಡ್ಡಾಯವಾಗಿ ಅಳವಡಿಸುವಂತೆ ಎಲ್ಲಾ ಖಾಸಗಿ ಬಸ್ಸುಗಳ ಮಾಲೀಕರಿಗೆ ಸೂಚಿಸುತ್ತಾ, ತಪ್ಪಿದಲ್ಲಿ ಮೋಟಾರು ವಾಹನ ಕಾಯ್ದೆ ಮತ್ತು ನಿಯಮಾವಳಿಯ ಅನುಸಾರ ಕಟ್ಟುನಿಟ್ಟಿನ ಕ್ರಮ ವಹಿಸಲಾಗುವುದೆಂದು ಸೂಚಿಸಲಾಯಿತು.

**(ಕ್ರಮ: ಬಸ್ ಬಾಡಿ ಬಿಲ್ಡರ್ಸ್, ಬಸ್ ಆಪರೇಟರ್ಸ್, ಪ್ರಾ.ಸಾ.ಅ.ಮತ್ತು ಕಾರ್ಯನಿರ್ವಾಹಕ ಸಿಬ್ಬಂದಿಗಳು)**

5. **The bus bodies built with extension to chassis shall be immediately removed from operation.**

ಕೆಲವು ವಾಹನ ಮಾಲೀಕರು ಬಸ್ ಚಾಸೀಸ್ ಅನ್ನು ಅನಧಿಕೃತವಾಗಿ ವಿಸ್ತರಣೆ ಮಾಡಿಕೊಂಡು ಬಸ್ ಬಾಡಿ ನಿರ್ಮಾಣ ಮಾಡುತ್ತಿರುವುದು ಮತ್ತು ಅಂತಹ ವಾಹನಗಳು ಅಪಘಾತಕ್ಕೆ ಈಡಾದಾಗ ಚಾಲಕನ ನಿಯಂತ್ರಣಕ್ಕೆ ಸಿಗದೇ ಅಪಘಾತ ಸಂಭವಿಸಿ ಪ್ರಯಾಣಿಕರ ಪ್ರಾಣಹಾನಿಯಾಗುತ್ತಿರುವುದು ಕಂಡುಬರುತ್ತಿದೆ. ಆದುದರಿಂದ ಅನಧಿಕೃತವಾಗಿ ವಿಸ್ತರಣೆ ಮಾಡಿ ನಿರ್ಮಿಸಲಾಗಿರುವ ಬಸ್‌ಗಳ ಕಾರ್ಯಾಚರಣೆಯನ್ನು ಕೂಡಲೇ ಜಾರಿಗೆ ಬರುವಂತೆ ನಿಲ್ಲಿಸಲು ಸೂಚಿಸಲಾಯಿತು.

ಮುಂದುವರೆದು, ಕೆಲವು ವಾಹನ ತಯಾರಕರು (ಓ.ಇ.ಎಂ.) ಕೇಂದ್ರ ಮೋಟಾರು ವಾಹನ ನಿಯಮಗಳು 1989ರ ನಿಯಮ 125-C ರಲ್ಲಿ ತಿಳಿಸಿರುವಂತೆ ವಾಹನವು Automotive Industry Standard AIS:052 ಹಾಗೂ Sleeper Coach Buses AIS:119 ಪ್ರಕಾರ ಇಲ್ಲದೇ ನಿಯಮ ಉಲ್ಲಂಘಿಸಿ AIS:052, AIS:119 ಅನ್ನು ಉಲ್ಲಂಘಿಸಿ ಬಸ್ ಕವಚಗಳನ್ನು ನಿರ್ಮಿಸುವಲ್ಲಿ ಕೆಲವು ಬದಲಾವಣೆಗಳನ್ನು ತರುತ್ತಿರುವುದು ಗಮನಕ್ಕೆ ಬಂದಿರುತ್ತದೆ, ಆದರೆ ಟೆಸ್ಟಿಂಗ್ ಏಜೆನ್ಸಿಗಳಿಂದ ಅನುಮೋದಿತವಾಗಿರುವ ವಾಹನಗಳನ್ನು ಮಾತ್ರ ನೋಂದಾಯಿಸಬೇಕೆಂದು ನಿರ್ದೇಶನ

ನೀಡುತ್ತಾ, ಮುಂದಿನ ದಿನಗಳಲ್ಲಿ ಬಸ್ ಬಾಡಿ ಬಿಲ್ಡರ್‌ಗಳು ಅನಧಿಕೃತವಾಗಿ ಈ ರೀತಿ ಬಸ್ ಕವಚವನ್ನು ನಿರ್ಮಿಸದಂತೆ ಎಚ್ಚರಿಕೆ ವಹಿಸಲು ಸೂಚಿಸಲಾಯಿತು.

**(ಕ್ರಮ: ಬಸ್ ಬಾಡಿ ಬಿಲ್ಡರ್ಸ್, ಬಸ್ ಆಪರೇಟರ್ಸ್, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು)**

**6. Registration of all types of buses shall be carried out with Form 22, 22A only with the approval of any approved test agency.**

ಎಲ್ಲಾ ವರ್ಗದ ಬಸ್ಸುಗಳ ನೋಂದಣಿ ಸಮಯದಲ್ಲಿ ಅನುಮೋದಿತ ಟೆಸ್ಟಿಂಗ್ ಏಜೆನ್ಸಿಗಳು ನೀಡುವ ಪ್ರಮಾಣ ಪತ್ರ ನಮೂನೆ-22 ಮತ್ತು 22ಎ ಗಳನ್ನು ಪರಿಶೀಲಿಸಿದ ನಂತರವೇ ನೋಂದಣಿಗೆ ಎಲ್ಲಾ ನೋಂದಣಿ ಪ್ರಾಧಿಕಾರಗಳು ಕ್ರಮ ವಹಿಸಬೇಕೆಂಬ ಸೂಚನೆಯನ್ನು ಕಡ್ಡಾಯವಾಗಿ ಪಾಲಿಸಲು ತಿಳಿಸುತ್ತಾ, ತಪ್ಪಿದಲ್ಲಿ ಸಂಬಂಧಪಟ್ಟ ನೋಂದಣಿ ಪ್ರಾಧಿಕಾರಿ ಮತ್ತು ಮೋಟಾರು ವಾಹನ ನಿರೀಕ್ಷಕರನ್ನೇ ನೇರ ಹೊಣೆಗಾರರನ್ನಾಗಿಸಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುತ್ತದೆ ಎಂದು ಎಚ್ಚರಿಸಲಾಯಿತು.

**(ಕ್ರಮ:** ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಸಿಬ್ಬಂದಿಗಳು)

**7. Each bus registration shall be attached with layout drawing with dimensions, door location, emergency exists, roof hatches.**

ಪ್ರತಿಯೊಂದು ಬಸ್ಸಿನ ನೋಂದಣಿ ಸಮಯದಲ್ಲಿ ಕಡ್ಡಾಯವಾಗಿ, ಬಸ್ಸಿನ ವಿನ್ಯಾಸ, ತುರ್ತು ನಿರ್ಗಮನ ದ್ವಾರಗಳು, ಅಗ್ನಿಶಾಮಕ ಸಾಧನ ಅಳವಡಿಕೆ (ಎಫ್.ಡಿ.ಎಸ್.ಎಸ್.) ಮತ್ತು ಆಸನ ಅಳವಡಿಕೆ, ಬಸ್ಸಿನ ಮೇಲ್ಛಾವಣಿ ವಿನ್ಯಾಸ ಇತ್ಯಾದಿ ರೇಖಾಚಿತ್ರವನ್ನು ಎಲ್ಲರಿಗೂ ಕಾಣುವಂತೆ ಬಸ್ಸಿನಲ್ಲಿ ಅಳವಡಿಸಿರುವುದನ್ನು ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರವೇ ನೋಂದಣಿಗೆ ಕ್ರಮ ವಹಿಸುವಂತೆ ಸೂಚಿಸಲಾಯಿತು.

**(ಕ್ರಮ: ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಸಿಬ್ಬಂದಿಗಳು)**

**8. Bus body builder's accreditation validity needs to be checked at the time of registration of any bus body.**

ಬಸ್ ಕವಚ ನಿರ್ಮಾಣ ಸಂಸ್ಥೆಗಳು ಕೇಂದ್ರ ಮೋಟಾರು ವಾಹನ ನಿಯಮಗಳು 1989 ರ ನಿಯಮ 126ರಂತೆ ಹೊಂದಿರುವ ಪ್ರಮಾಣಪತ್ರದ ಸಿಂಧುತ್ವವನ್ನು ಪರಿಶೀಲಿಸಿದ ನಂತರವಷ್ಟೇ

ಸದರಿ ಕಂಪನಿಗಳು ನಿರ್ಮಿಸುವ ವಾಹನಗಳನ್ನು ನೋಂದಾಯಿಸಲು ಕ್ರಮ ವಹಿಸಲು ನೀಡಿರುವ ನಿರ್ದೇಶನವನ್ನು ಎಲ್ಲಾ ನೋಂದಣಿ ಪ್ರಾಧಿಕಾರಿಗಳು ಚಾಚೂ ತಪ್ಪದೇ ಕಡ್ಡಾಯವಾಗಿ ಪಾಲಿಸುವಂತೆ ಸೂಚನೆ ನೀಡಲಾಯಿತು.

**(ಕ್ರಮ: ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಸಿಬ್ಬಂದಿಗಳು)**

**9. Luggage carriers fitted on buses have to be removed**

AIS:119 ಕ್ಕೆ ಅನುಗುಣವಾಗಿ ಕವಚ ನಿರ್ಮಾಣ ಮಾಡಲಾದ ಬಸ್ಸುಗಳ ಮೇಲ್ಛಾವಣಿಗಳಲ್ಲಿ ಅನಧಿಕೃತವಾಗಿ ಲಗೇಜ್ ಕ್ಯಾರಿಯರ್ ಗಳನ್ನು ಅಳವಡಿಸಿ, ಅಪಾಯಕರ ರೀತಿಯಲ್ಲಿ ಕಾರ್ಯಾಚರಣೆ ಮಾಡುತ್ತಿರುವುದು ಮತ್ತು ಆ ಮೂಲಕ ರಸ್ತೆ ಅಪಘಾತಗಳಿಗೆ ಕಾರಣವಾಗುತ್ತಿರುವುದನ್ನು ಗಮನಿಸಲಾಗಿದೆ. ಆದ್ದರಿಂದ, ಈ ರೀತಿ ಅಳವಡಿಸಿರುವ ಲಗೇಜ್ ಕ್ಯಾರಿಯರ್ ಗಳನ್ನು ಕೂಡಲೇ ಜಾರಿಗೆ ಬರುವಂತೆ ತೆಗೆದು ಹಾಕಲು ಕ್ರಮವಹಿಸುವಂತೆ ಬಸ್ ಮಾಲೀಕರಿಗೆ ಸೂಚನೆ ನೀಡಲಾಯಿತು. ಈ ಕುರಿತು ವಾಹನಗಳ ಅರ್ಹತಾ ಪತ್ರ ನವೀಕರಣ ಸಮಯದಲ್ಲಿ ಪರಿಶೀಲಿಸಿ, ಲಗೇಜ್ ಕ್ಯಾರಿಯರ್ ಇಲ್ಲದೇ ಇರುವುದನ್ನು ಖಚಿತಪಡಿಸಿಕೊಂಡು ಅರ್ಹತಾಪತ್ರ ನವೀಕರಿಸಲು ಸೂಚಿಸಲಾಯಿತು. ಇದಲ್ಲದೆ, ಪ್ರವರ್ತನ ಸಮಯದಲ್ಲಿ ಲಗೇಜ್ ಕ್ಯಾರಿಯರ್‌ಗಳು ಕಂಡು ಬಂದಲ್ಲಿ ಕೂಡಲೇ ತೆಗೆದುಹಾಕಲು ಕ್ರಮ ವಹಿಸುವಂತೆಯೂ ಸಹ ಸೂಚನೆಗಳನ್ನು ನೀಡಲಾಯಿತು. ಇನ್ನುಮುಂದೆ ಬಸ್‌ಗಳಲ್ಲಿ ಪ್ರಯಾಣಿಕರ ಲಗೇಜ್ ಅನ್ನು ಮಾತ್ರ ಕೊಂಡೊಯ್ಯಲು ಮತ್ತು ಇತರೆ ಅನಧಿಕೃತ ಲಗೇಜುಗಳನ್ನು ಸಾಗಣೆ ಮಾಡಿದಲ್ಲಿ ಅಂತಹ ವಾಹನಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲು ತಿಳಿಸಲಾಯಿತು.

**10. As per AIS:119, minimum 4 numbers of emergency exits are mandatory for buses with length of 12 mtr and 5 numbers of emergency exits are mandatory for buses with length of more than 12 mtr.**

ಬಸ್ ಬಾಡಿ ಕೋಡ್ AIS:119 ರಲ್ಲಿ ನಿಗದಿಪಡಿಸಿರುವ ಮಾನದಂಡಗಳ ಪ್ರಕಾರ, 12 ಮೀಟರ್ ಉದ್ದಳತೆಯ ಬಸ್ಸುಗಳಲ್ಲಿ ಕನಿಷ್ಠ 4 ತುರ್ತು ನಿರ್ಗಮನ ದ್ವಾರಗಳು ಮತ್ತು 12 ಮೀಟರ್ ಗಿಂತ ಹೆಚ್ಚಿನ ಉದ್ದಳತೆಯ ಬಸ್ಸುಗಳಲ್ಲಿ ಕನಿಷ್ಠ 5 ತುರ್ತು ನಿರ್ಗಮನ ದ್ವಾರಗಳು ಇರುವುದು ಕಡ್ಡಾಯವಾಗಿದೆ. ಈ ಕುರಿತು ಹೊಸ ಬಸ್ಸುಗಳ ನೋಂದಣಿ ಮತ್ತು ಅರ್ಹತಾ ಪತ್ರ ನವೀಕರಣ ಸಮಯದಲ್ಲಿ ಪರಿಶೀಲಿಸಿ, ಮೇಲ್ಕಂಡಂತೆ ಕನಿಷ್ಠ ಸಂಖ್ಯೆಯ ತುರ್ತು ನಿರ್ಗಮನ ದ್ವಾರಗಳು

--8

ಇರುವುದನ್ನು ಖಚಿತಪಡಿಸಿಕೊಂಡು ವಾಹನ ನೋಂದಣಿ ಮತ್ತು ಅರ್ಹತಾಪತ್ರ ನವೀಕರಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**(ಕ್ರಮ: ಬಸ್ ಬಾಡಿ ಬಿಲ್ಡರ್ಸ್, ಬಸ್ ಆಪರೇಟರ್ಸ್, ಪ್ರಾ.ಸಾ.ಅ.ಮತ್ತು ಕಾರ್ಯನಿರ್ವಾಹಕ ಸಿಬ್ಬಂದಿಗಳು)**

ಇದಲ್ಲದೆ, ಪ್ರಯಾಣಿಕರ ಸುರಕ್ಷತೆಗೆ ಸಂಬಂಧಪಟ್ಟಂತೆ ಜಾಗೃತಿ ಮೂಡಿಸುವ ಸಲುವಾಗಿ ಎಲ್ಲಾ ಬಸ್ಸುಗಳಲ್ಲಿ Public Address System ಅಳವಡಿಸಿಕೊಂಡು ಅಗತ್ಯ ಸುರಕ್ಷತಾ ಕ್ರಮಗಳ ಬಗ್ಗೆ ತಿಳಿಸಲು ಸೂಚಿಸಲಾಯಿತು. ಕೊನೆಯದಾಗಿ, ಮೇಲ್ಕಂಡಂತೆ ಕೇಂದ್ರ ಮಾನವ ಹಕ್ಕು ಆಯೋಗದ ನಿರ್ದೇಶನಗಳಂತೆ ಎಲ್ಲಾ ಬಸ್ ಬಾಡಿ ಬಿಲ್ಡರ್ಸ್, ಎಲ್ಲಾ ಟ್ರಾನ್ಸ್ ಪೋರ್ಟ್ ಆಪರೇಟರ್ ಗಳು ಬಸ್ಸುಗಳಲ್ಲಿ ಸುರಕ್ಷತಾ ಕ್ರಮಗಳನ್ನು **ದಿನಾಂಕ:28-02-2026** ರೊಳಗಾಗಿ ಕಡ್ಡಾಯವಾಗಿ ಅನುಷ್ಠಾನಗೊಳಿಸತಕ್ಕದ್ದು. ಮೇಲೆ ತಿಳಿಸಿರುವಂತೆ, ಬಸ್ಸುಗಳಲ್ಲಿ ಅಗತ್ಯ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಎಲ್ಲಾ ನೋಂದಣಿ ಪ್ರಾಧಿಕಾರಿಗಳು ಮತ್ತು ಪ್ರವರ್ತನ ಅಧಿಕಾರಿಗಳು ವಾಹನ ನೋಂದಣಿ ಹಾಗೂ ಅರ್ಹತಾಪತ್ರ ನೀಡಿಕೆ/ ನವೀಕರಣ ಸಮಯದಲ್ಲಿ ಕೂಲಂಕುಷವಾಗಿ ಪರಿಶೀಲಿಸತಕ್ಕದ್ದು. ಸದರಿ ಸೂಚನೆಗಳನ್ನು ಕಡ್ಡಾಯವಾಗಿ ಮತ್ತು ಚಾಚೂ ತಪ್ಪದೇ ಪಾಲಿಸುವಂತೆ, ತಪ್ಪಿದಲ್ಲಿ ಸಂಬಂಧ ಪಟ್ಟವರನ್ನೇ ನೇರವಾಗಿ ಜವಾಬ್ದಾರರನ್ನಾಗಿ ಮಾಡಿ ಅವರುಗಳ ವಿರುದ್ಧ ಶಿಸ್ತು ಕ್ರಮಗಳನ್ನು ಕೈಗೊಳ್ಳುವುದಾಗಿ ತಿಳಿಸಲಾಯಿತು.

ಮೇಲ್ಕಂಡ ನಿರ್ದೇಶನಗಳನ್ನು ಪಾಲಿಸಿರುವ ಕುರಿತು ಕೂಡಲೇ ಅನುಪಾಲನಾ ವರದಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ರಾಮಲಿಂಗಾರೆಡ್ಡಿ)**
**ಮಾನ್ಯ ಸಚಿವರು,**
**ಸಾರಿಗೆ ಮತ್ತು ಮುಜರಾಯಿ ಇಲಾಖೆ.**

**<u>ಪ್ರತಿಗಳು :</u>**

1] ಸರ್ಕಾರದ ಕಾರ್ಯದರ್ಶಿ, ಸಾರಿಗೆ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು, ಇವರ ಮಾಹಿತಿಗಾಗಿ.

2] ಆಯುಕ್ತರು, ಸಾರಿಗೆ ಮತ್ತುರಸ್ತೆ ಸುರಕ್ಷತೆ, ಬೆಂಗಳೂರು ಇವರ ಸೂಕ್ತ ಕ್ರಮಕ್ಕಾಗಿ.

3] ರಾಜ್ಯದ ಎಲ್ಲಾ ಅಪರ ಸಾರಿಗೆ ಆಯುಕ್ತರು, ಜಂಟಿ ಸಾರಿಗೆ ಆಯುಕ್ತರು ಮತ್ತುಎಲ್ಲಾ ನೋಂದಣಿ ಪ್ರಾಧಿಕಾರಗಳಿಗೆ.

4] ರಾಜ್ಯದ ಎಲ್ಲಾ ಬಸ್ ಬಾಡಿ ಬಿಲ್ಡರ್ಸ್ ಗಳಿಗೆ ಸೂಕ್ತ ಕ್ರಮಕ್ಕಾಗಿ.

5] ರಾಜ್ಯದ ಎಲ್ಲಾ ಖಾಸಗಿ ಬಸ್ ಮಾಲೀಕರು/ಆಪರೇಟರ್ಸ್ ಗಳಿಗೆ ಸೂಕ್ತ ಕ್ರಮಕ್ಕಾಗಿ.

ಅನುಬಂಧ-2

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ತಪಾಸಣೆಗೊಳಪಡಿಸಿದ ವಾಹನಗಳ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | 5164 |
| 2 | ಬೆಂಗಳೂರು (ಗ್ರಾಮಾಂತರ) | 33 |
| 3 | ಮೈಸೂರು | 1103 |
| 4 | ಹುಬ್ಬಳ್ಳಿ-ಧಾರವಾಡ | 382 |
| 5 | ಮಂಗಳೂರು | 995 |
| 6 | ಬೆಳಗಾವಿ | 264 |
| 7 | ಕಲಬುರ್ಗಿ | 09 |
| 8 | ಕೋಲಾರ | 1827 |
| 09 | ತುಮಕೂರು | 652 |
| 10 | ರಾಮನಗರ | 09 |
| 11 | ಚಿಕ್ಕಬಳ್ಳಾಪುರ | 169 |
| 12 | ಮಂಡ್ಯ | 674 |
| 13 | ಹಾಸನ | 824 |
| 14 | ಚಾಮರಾಜನಗರ | 62 |
| 15 | ಕೊಡಗು | - |
| 16 | ಉತ್ತರ ಕನ್ನಡ | 339 |
| 17 | ಚಿಕ್ಕಮಗಳೂರು | - |
| 18 | ಉಡುಪಿ | 104 |
| 19 | ದಾವಣಗೆರೆ | 115 |
| 20 | ಚಿತ್ರದುರ್ಗ | 213 |
| 21 | ಶಿವಮೊಗ್ಗ | 52 |
| 22 | ಹಾವೇರಿ | 108 |
| 23 | ಬಿಜಾಪುರ | 51 |
| 24 | ಬಾಗಲಕೋಟೆ | 79 |
| 25 | ಗದಗ | 48 |
| 26 | ಬೀದರ್ | 02 |
| 27 | ಯಾದಗೀರ್ | - |
| 28 | ರಾಯಚೂರು | 07 |
| 29 | ಕೊಪ್ಪಳ | 205 |
| 30 | ಬಳ್ಳಾರಿ | - |
| 31 | ವಿಜಯನಗರ | 309 |
| | **ಒಟ್ಟು** | **13799** |

ಅಪರ ಸಾರಿಗೆ ಆಯುಕ್ತರು,
(ಪ್ರವರ್ತನ) (ದಕ್ಷಿಣ), ಬೆಂಗಳೂರು.

ಅನುಬಂಧ-3

(2)

| ಕ್ರ ಸಂ. | ಘಟಕಗಳ ಹೆಸರು | ಅತಿಯಾದ ವೇಗದಿಂದ ಮತ್ತು ಚಾಲಕನ ಅಜಾಗರೂಕತೆ ಮುಂತಾದ ಕಾರಣಗಳಿಂದ ಸಂಭವಿಸಿದ ಒಟ್ಟು ಅಪಘಾತಗಳು | | | | | | ಮದ್ಯ ಸೇವಿಸಿ ವಾಹನ ಚಲಾಯಿಸಿ ಸಂಭವಿಸಿದ ಸಂಭವಿಸಿದ ಒಟ್ಟು ಅಪಘಾತಗಳು | | | | | |
|---|---|---|---|---|---|---|---|---|---|---|---|---|---|
| | | ಸರ್ಕಾರಿ ಬಸ್ಸುಗಳು | | | ಖಾಸಗಿ ಬಸ್ಸುಗಳು | | | ಸರ್ಕಾರಿ ಬಸ್ಸುಗಳು | | | ಖಾಸಗಿ ಬಸ್ಸುಗಳು | | |
| | | 2023 | 2024 | 2025 | 2023 | 2024 | 2025 | 2023 | 2024 | 2025 | 2023 | 2024 | 2025 |
| 1 | Bangalore City | 163 | 197 | 216 | 117 | 135 | 152 | 0 | 0 | 0 | 6 | 8 | 5 |
| 2 | Mysore City | 30 | 40 | 43 | 5 | 12 | 8 | 0 | 1 | 0 | 0 | 0 | 0 |
| 3 | Hublli Dharwad City | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 4 | Mangalore City | 10 | 7 | 9 | 88 | 71 | 85 | 0 | 0 | 0 | 0 | 0 | 0 |
| 5 | Belagavi City | 19 | 28 | 19 | 1 | 4 | 3 | 2 | 1 | 1 | 0 | 0 | 0 |
| 6 | Kalaburagi City | 37 | 34 | 25 | 5 | 3 | 6 | 0 | 0 | 0 | 0 | 0 | 0 |
| 7 | Bengaluru Dist. | 60 | 72 | 66 | 30 | 23 | 31 | 0 | 0 | 0 | 0 | 0 | 0 |
| 8 | Kolar Dist. | 11 | 24 | 17 | 18 | 21 | 16 | 0 | 0 | 0 | 0 | 0 | 0 |
| 9 | K.G.F | 2 | 0 | 0 | 3 | 0 | 0 | 0 | 0 | 1 | 0 | 0 | 2 |
| 10 | Tumkur Dist. | 54 | 63 | 79 | 48 | 54 | 46 | 0 | 0 | 0 | 0 | 0 | 0 |
| 11 | Ramanagara Dist. | 49 | 67 | 66 | 23 | 32 | 23 | 0 | 0 | 0 | 0 | 0 | 0 |
| 12 | Chikkaballapura Dist. | 20 | 23 | 15 | 30 | 22 | 19 | 0 | 0 | 0 | 0 | 0 | 1 |
| 13 | Mysore Dist. | 82 | 34 | 78 | 15 | 12 | 21 | 0 | 0 | 0 | 0 | 0 | 0 |
| 14 | Mandya Dist. | 53 | 53 | 57 | 12 | 17 | 19 | 0 | 0 | 0 | 0 | 0 | 0 |
| 15 | Hassan Dist. | 54 | 61 | 57 | 6 | 10 | 14 | 0 | 0 | 0 | 0 | 0 | 0 |
| 16 | C.Nagar Dist. | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 17 | Kodagu Dist | 8 | 7 | 5 | 6 | 4 | 8 | 0 | 0 | 0 | 0 | 0 | 2 |
| 18 | D.K Dist. | 23 | 29 | 28 | 15 | 12 | 22 | 0 | 0 | 0 | 0 | 0 | 0 |
| 19 | U.K Dist. | 30 | 46 | 42 | 18 | 13 | 23 | 0 | 0 | 0 | 0 | 0 | 0 |
| 20 | Chikamagalur Dist. | 32 | 29 | 32 | 13 | 14 | 6 | 0 | 0 | 0 | 0 | 0 | 0 |
| 21 | Udupi Dist. | 12 | 17 | 11 | 79 | 71 | 74 | 0 | 0 | 0 | 0 | 0 | 1 |
| 22 | Davanagere Dist. | 7 | 5 | 3 | 13 | 13 | 9 | 0 | 0 | 0 | 0 | 0 | 0 |
| 23 | Chitradurga Dist. | 8 | 7 | 5 | 6 | 4 | 8 | 0 | 0 | 0 | 0 | 0 | 2 |
| 24 | Shimoga Dist. | 24 | 38 | 34 | 52 | 50 | 61 | 0 | 0 | 0 | 0 | 0 | 0 |
| 25 | Haveri Dist. | 29 | 44 | 36 | 4 | 12 | 15 | 0 | 0 | 0 | 0 | 0 | 0 |
| 26 | Belgaum Dist. | 72 | 82 | 74 | 3 | 3 | 11 | 0 | 0 | 0 | 0 | 0 | 0 |
| 27 | 9Dharwad Dist. | 29 | 37 | 25 | 6 | 5 | 5 | 0 | 0 | 0 | 0 | 0 | 0 |
| 28 | Vijayapura Dist. | 32 | 45 | 45 | 5 | 10 | 3 | 0 | 0 | 0 | 0 | 0 | 0 |
| 29 | Bagalkot Dist. | 36 | 37 | 48 | 3 | 3 | 4 | 0 | 0 | 0 | 0 | 0 | 0 |
| 30 | Gadag Dist. | 22 | 23 | 20 | 3 | 1 | 3 | 0 | 0 | 0 | 0 | 0 | 0 |
| 31 | Bidar Dist. | 0 | 0 | 0 | 0 | 0 | 0 | 0 | 0 | 0 | 0 | 0 | 0 |
| 32 | Gulbarga Dist. | 13 | 18 | 23 | 0 | 0 | 1 | 0 | 0 | 0 | 0 | 0 | 0 |
| 33 | Yadgir Dist. | 11 | 19 | 22 | 2 | 2 | 4 | 0 | 0 | 0 | 0 | 0 | 0 |
| 34 | Raichur Dist. | 34 | 33 | 36 | 1 | 6 | 5 | 0 | 0 | 0 | 0 | 0 | 0 |
| 35 | Koppal Dist. | 28 | 28 | 30 | 2 | 11 | 7 | 0 | 0 | 0 | 0 | 0 | 0 |
| 36 | Bellary Dist. | 16 | 10 | 31 | 4 | 3 | 7 | 0 | 0 | 0 | 0 | 0 | 0 |
| 37 | Vijayanagar Dist. | 35 | 21 | 23 | 7 | 4 | 15 | 0 | 0 | 0 | 0 | 0 | 0 |
| | Total | **1145** | **1278** | **1320** | **643** | **657** | **734** | **2** | **2** | **2** | **6** | **8** | **13** |

KSRTC

ಅನುಬಂಧ-4

ಅನುಬಂಧ.

ಕ.ರಾ.ರ.ಸಾ ನಿಗಮದಲ್ಲಿ ಕಳೆದ(3) 5 ವರ್ಷಗಳಲ್ಲಿ ಸಂಭವಿಸಿದ ಅಪಘಾತಗಳ ಸಂಖ್ಯೆ ವಿವರ

| ಕ್ರ. ಸಂ | ವಿಭಾಗಗಳು | 2020-21 | 2021-22 | 2022-23 | 2023-24 | 2024-25 | 2025-26 (ಡಿಸೆಂಬರ್ ವರೆಗೆ) |
|---|---|---|---|---|---|---|---|
| 1 | ಬೆಂ.ಕೇ.ವಿಭಾಗ | 25 | 48 | 66 | 58 | 40 | 39 |
| 2 | ರಾಮನಗರ | 23 | 32 | 43 | 48 | 47 | 35 |
| 3 | ತುಮಕೂರು | 17 | 34 | 42 | 66 | 68 | 48 |
| 4 | ಕೋಲಾರ | 30 | 33 | 48 | 34 | 49 | 33 |
| 5 | ಚಿಕ್ಕಬಳ್ಳಾಪುರ | 13 | 27 | 40 | 55 | 41 | 39 |
| 6 | ಮೈಸೂರು | 35 | 38 | 82 | 93 | 85 | 68 |
| 7 | ಮೈಸೂರು ನಗರ | 5 | 9 | 0 | 7 | 54 | 37 |
| 8 | ಮಂಡ್ಯ | 22 | 24 | 50 | 46 | 56 | 43 |
| 9 | ಚಾಮರಾಜನಗರ | 26 | 36 | 51 | 78 | 85 | 52 |
| 10 | ಹಾಸನ | 28 | 37 | 51 | 63 | 55 | 30 |
| 11 | ಚಿಕ್ಕಮಗಳೂರು | 29 | 40 | 52 | 54 | 47 | 40 |
| 12 | ಮಂಗಳೂರು | 31 | 37 | 65 | 70 | 63 | 47 |
| 13 | ಪುತ್ತೂರು | 33 | 36 | 46 | 53 | 58 | 42 |
| 14 | ದಾವಣಗೆರೆ | 16 | 22 | 38 | 38 | 44 | 33 |
| 15 | ಶಿವಮೊಗ್ಗ | 36 | 20 | 64 | 57 | 63 | 40 |
| 16 | ಚಿತ್ರದುರ್ಗ | 18 | 21 | 32 | 27 | 35 | 30 |
| | ಒಟ್ಟು | **387** | **494** | **770** | **847** | **890** | **656** |

Gunaraja H

ಮುಖ್ಯ ಸಂಚಾರ ವ್ಯವಸ್ಥಾಪಕರು(ಕಾ)
ಕ.ರಾ.ರ.ಸಾ.ನಿಗಮ

ಅನುಬಂಧ - A BMTC

**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 23 (170) |
| 2 | ಉತ್ತರಿಸಬೇಕಾದ ದಿನಾಂಕ | 28.01.2026 |
| 3. | ವಿಧಾನ ಪರಿಷತ್ತು ಸದಸ್ಯರ ಹೆಸರು | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 4. | ಉತ್ತರಿಸಬೇಕಾದವರು | ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |

ಹೆಚ್ಚುವರಿ ಮಾಹಿತಿ:

| ಕ್ರ ಸಂ | ವರ್ಷ | ಚಾಲಕರ ಅಜಾಗರುಕತೆಯಿಂದ ಸಂಭವಿಸಿರುವ ಅಪಘಾತಗಳ ಸಂಖ್ಯೆ | ಚಾಲಕರು ಭಾಗಶಃ ಹೊಣೆಗಾರರಾಗಿರುವ ಅಪಘಾತಗಳ ಸಂಖ್ಯೆ |
|---|---|---|---|
| 1 | 2021–22 | 60 | 48 |
| 2 | 2022–23 | 96 | 73 |
| 3 | 2023–24 | 85 | 70 |
| 4 | 2024–25 | 66 | 56 |
| 5 | 2025–26 (Till Dec-2025) | 45 | 38 |

ಮುಖ್ಯ ಸಂಚಾರ ವ್ಯವಸ್ಥಾಪಕರು (ಆ)
ಬೆಂ.ಮ.ಸಾ.ಸಂಸ್ಥೆ.

KKRTC

# ಅನುಬಂಧ- 4

ಕಳೆದ 05 ವರ್ಷಗಳಲ್ಲಿ ಉಂಟಾದ ಜಿಲ್ಲಾವಾರು ಅಪಘಾತಗಳ ವಿವರಗಳ ಪಟ್ಟಿ

| ಕ್ರ. ಸಂ | ಜಿಲ್ಲೆ | 2021-22 | 2022-23 | 2023-24 | 2024-25 | 2025-26 (ಡಿಸೆಂಬರ್-25 ರವರೆಗೆ) | ಒಟ್ಟು |
|---|---|---|---|---|---|---|---|
| 1 | ಕಲಬುರಗಿ | 48 | 65 | 67 | 82 | 51 | 313 |
| 2 | ಯಾದಗಿರ | 21 | 26 | 23 | 29 | 26 | 125 |
| 3 | ಬೀದರ | 33 | 47 | 54 | 54 | 50 | 238 |
| 4 | ರಾಯಚೂರು | 30 | 42 | 56 | 63 | 46 | 237 |
| 5 | ಬಳ್ಳಾರಿ | 16 | 34 | 41 | 54 | 34 | 179 |
| 6 | ವಿಜಯನಗರ | 24 | 39 | 40 | 38 | 24 | 165 |
| 7 | ಕೊಪ್ಪಳ | 16 | 32 | 34 | 44 | 35 | 161 |
| 8 | ವಿಜಯಪುರ | 25 | 42 | 43 | 56 | 44 | 210 |

ಮುಖ್ಯ ಸಂಚಾರ ವ್ಯವಸ್ಥಾಪಕರು

Scanned with OKEN Scan

ಅನುಬಂಧ-4 NWKRTC

ಅನುಬಂಧ

## ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ 2020-21 ರಿಂದ 2025-26(ಡಿಸೆಂಬರ್-2025) ರವರೆಗಿನ ಜಿಲ್ಲಾವಾರು ಒಟ್ಟು ಅಪಘಾತಗಳ ಅಂಕಿ-ಸಂಖ್ಯೆಗಳು

### ಧಾರವಾಡ ಜಿಲ್ಲೆ

| ವರ್ಷ | ಅಪಘಾತಗಳು | | | |
|---|---|---|---|---|
| | ಮಾರಣಾಂತಿಕ | ಗಂಭೀರ | ಸಾಮಾನ್ಯ | ಒಟ್ಟು |
| 2020-21 | 11 | 10 | 35 | 56 |
| 2021-22 | 12 | 7 | 39 | 58 |
| 2022-23 | 14 | 11 | 48 | 73 |
| 2023-24 | 18 | 13 | 54 | 85 |
| 2024-25 | 18 | 14 | 46 | 78 |
| 2025-26 | 13 | 10 | 37 | 60 |
| ಒಟ್ಟು | 86 | 65 | 259 | 410 |

### ಬಾಗಲಕೋಟೆ ಜಿಲ್ಲೆ

| ವರ್ಷ | ಅಪಘಾತಗಳು | | | |
|---|---|---|---|---|
| | ಮಾರಣಾಂತಿಕ | ಗಂಭೀರ | ಸಾಮಾನ್ಯ | ಒಟ್ಟು |
| 2020-21 | 15 | 6 | 8 | 29 |
| 2021-22 | 6 | 8 | 15 | 29 |
| 2022-23 | 21 | 15 | 17 | 53 |
| 2023-24 | 17 | 19 | 6 | 42 |
| 2024-25 | 23 | 19 | 20 | 62 |
| 2025-26 | 7 | 11 | 13 | 31 |
| ಒಟ್ಟು | 89 | 78 | 79 | 246 |

### ಹಾವೇರಿ ಜಿಲ್ಲೆ

| ವರ್ಷ | ಅಪಘಾತಗಳು | | | |
|---|---|---|---|---|
| | ಮಾರಣಾಂತಿಕ | ಗಂಭೀರ | ಸಾಮಾನ್ಯ | ಒಟ್ಟು |
| 2020-21 | 4 | 4 | 15 | 23 |
| 2021-22 | 12 | 2 | 25 | 39 |
| 2022-23 | 5 | 12 | 29 | 46 |
| 2023-24 | 13 | 4 | 27 | 44 |
| 2024-25 | 15 | 7 | 35 | 57 |
| 2025-26 | 11 | 7 | 18 | 36 |
| ಒಟ್ಟು | 60 | 36 | 149 | 245 |

### ಗದಗ ಜಿಲ್ಲೆ

| ವರ್ಷ | ಅಪಘಾತಗಳು | | | |
|---|---|---|---|---|
| | ಮಾರಣಾಂತಿಕ | ಗಂಭೀರ | ಸಾಮಾನ್ಯ | ಒಟ್ಟು |
| 2020-21 | 5 | 2 | 16 | 23 |
| 2021-22 | 12 | 2 | 18 | 32 |
| 2022-23 | 14 | 5 | 11 | 30 |
| 2023-24 | 15 | 7 | 23 | 45 |
| 2024-25 | 11 | 3 | 26 | 40 |
| 2025-26 | 7 | 5 | 15 | 27 |
| ಒಟ್ಟು | 64 | 24 | 109 | 197 |

### ಬೆಳಗಾವಿ ಜಿಲ್ಲೆ

| ವರ್ಷ | ಅಪಘಾತಗಳು | | | |
|---|---|---|---|---|
| | ಮಾರಣಾಂತಿಕ | ಗಂಭೀರ | ಸಾಮಾನ್ಯ | ಒಟ್ಟು |
| 2020-21 | 17 | 10 | 29 | 56 |
| 2021-22 | 21 | 7 | 39 | 67 |
| 2022-23 | 20 | 23 | 55 | 98 |
| 2023-24 | 32 | 15 | 47 | 94 |
| 2024-25 | 31 | 25 | 69 | 125 |
| 2025-26 | 18 | 24 | 51 | 93 |
| ಒಟ್ಟು | 139 | 104 | 290 | 533 |

### ಉತ್ತರ ಕನ್ನಡ ಜಿಲ್ಲೆ

| ವರ್ಷ | ಅಪಘಾತಗಳು | | | |
|---|---|---|---|---|
| | ಮಾರಣಾಂತಿಕ | ಗಂಭೀರ | ಸಾಮಾನ್ಯ | ಒಟ್ಟು |
| 2020-21 | 7 | 5 | 16 | 28 |
| 2021-22 | 7 | 9 | 18 | 34 |
| 2022-23 | 13 | 11 | 39 | 63 |
| 2023-24 | 13 | 16 | 38 | 67 |
| 2024-25 | 11 | 12 | 48 | 71 |
| 2025-26 | 16 | 14 | 23 | 53 |
| ಒಟ್ಟು | 67 | 67 | 182 | 316 |

### ಸಂಸ್ಥೆಯ

| ವರ್ಷ | ಅಪಘಾತಗಳು | | | |
|---|---|---|---|---|
| | ಮಾರಣಾಂತಿಕ | ಗಂಭೀರ | ಸಾಮಾನ್ಯ | ಒಟ್ಟು |
| 2020-21 | 59 | 37 | 119 | 215 |
| 2021-22 | 70 | 35 | 154 | 259 |
| 2022-23 | 87 | 77 | 199 | 363 |
| 2023-24 | 108 | 74 | 195 | 377 |
| 2024-25 | 109 | 80 | 244 | 433 |
| 2025-26 | 72 | 71 | 157 | 300 |
| ಒಟ್ಟು | 505 | 374 | 1068 | 1947 |

ಮುಖ್ಯ ಸಂಚಾರ ವ್ಯವಸ್ಥಾಪಕರು
ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಕೇಂದ್ರ ಕಛೇರಿ, ಹುಬ್ಬಳ್ಳಿ